# ಬೃಹಚ್ಚರಣ

**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಬಿ.ಎಸ್. ಸೂರ್ಯನಾರಾಯಣ | ಸದಸ್ಯರು |
| ಕೆ.ಸಿ. ನಟರಾಜನ್ | ಸದಸ್ಯರು |
| ಎನ್. ಚಂದ್ರಮೌಳಿ | ಸದಸ್ಯರು |
| ಅಚಲ ರಮೇಶ್ | ಸದಸ್ಯರು |
| ಕೆ.ಎಸ್. ಮಧುಸೂದನ | ಸಂಪಾದಕ |

ಸಂಪುಟ : 1 ಸಂಚಿಕೆ : 2 ತ್ರೈಮಾಸಿಕ ವಾರ್ತಾಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2011


## ಅರ್ಪಣೆ

ಬೃಹಚ್ಚರಣ ಈ ಸಂಚಿಕೆಯನ್ನು ಪ್ರಸಿದ್ಧ ಸಸ್ಯವಿಜ್ಞಾನಿ ಡಾ. ಜಿ.ಜಿ.ಎಲ್. ಸ್ವಾಮಿ ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.



## ಸಂಪಾದಕೀಯ

ಎಲ್ಲಾರ್‌ಕೊ ಪುದೂ ವರ್ಷತಿ ಶುಭಾಶಯುಂಗು. ಇಂದ್ ಸಂಚಿಕೆ ಕೊಂಚು ಲೇಟ್ ವರಾನೆ ಅದೆ. ಈ ಸಲು ಕೊಂಚು ಪೇಜು ಜಾಸ್ತಿ ಪಣ್ಣದೆ. ಲೇಕನುಂಗು ವಂದಿರುಕುದ್ದು ಶಾನೆ ಕಮ್ಮಿ. ವೇರ್ವೇರೆ ವಿಷಯುಂಗ್ಳಿ ಮೇಲೆ ವಳದಿ ಅನ್ಪಿಯೊಂಗೊ. ಇಂದ್ ಸಂಚಿಕೇಲೆ 28–10–2011ರನ್ಕಿ ನಡಂದ್ ಕಾರ್ಯಕ್ರಮಂಗ್ಳಿ ಫೋಟೋಗ್ಳೆ ಪೋಟದೆ. ಅಪ್ಪಡ್ಯೆ ಒರೆರಂಡ್‌ಮೂನ್ ಪೇರು ಕಾಗದು ವಳದಿರ್‌ಂದ, ಅಂದ್ ಕಾಗದಂಗ್ಳೆ ಪ್ರಕಟೀಚಿರಾಕ್ರೊ. ನಮ್ದೆ ವಾತೇಲೆ ಇರ್‌ಕರ್ ಪದಬಂದ್‌ತ್ಕು ಸರಿಯ್ಯ ಉತ್ತರು ವಂದ್ಕ ವಳದನ್ಪಿಯೊಂಗೊ. ಪದ್ಯುಂಗು, ಪಾಟ್‌ಗು ವಳದಿರುಂದ್ಕ ಅನ್ಪಿಯೊಂಗೊ. ತಿರುಂಬಾ ಶುಬಾಶಯುಂಗು.

■ ಕೆ.ಎಸ್. ಮಧುಸೂದನ

## ಪ್ರಕಟಣೆಗಳು

- ನಮ್ಮ ಸಮುದಾಯದವರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಡಿಸೆಂಬರ್ 31ರಂದು ಸಂಜೆ 4–30ಕ್ಕೆ ಆದಿ ರಾಮಯ್ಯ ಆದಿ ಲಕ್ಷ್ಮಯ್ಯ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದೆ. ಸ್ಥಳದ ಪ್ರಾಯೋಜಕರು **ಶ್ರೀ ಟಿ.ಎಸ್. ಕೃಷ್ಣನ್.**
- ತಮ್ಮ ವೃತ್ತಿ, ಪ್ರಗತಿ, ಅಭಿವೃದ್ಧಿಗಾಗಿ ತಮ್ಮ ಕಛೇರಿ, ಕಾರ್ಖಾನೆ ವ್ಯಾಪಾರ ವಹಿವಾಟಿನ ಪ್ರಕಟಣೆ **'ಬೃಹಚ್ಚರಣ'** ಪತ್ರಿಕೆಯಲ್ಲಿ ಪ್ರಾಯೋಜಕತೆಯ ಮೇಲೆ ಪ್ರಕಟಿಸಲಾಗುವುದು.
- ನಮ್ಮ ಸಮುದಾಯದವರು ಯಾರೇ ನಮ್ಮನ್ನಗಲಿದಲ್ಲಿ ಅವರಿಗೆ ಅಂತಿಮ ಗೌರವ ಅರ್ಪಿಸುವುದು ನಮ್ಮ ಕರ್ತವ್ಯ. ತಮಗೇನಾದರೂ ತಮ್ಮನ್ನಗಲಿದವರ ವಿವರ ತಿಳಿದರೆ, ದಯವಿಟ್ಟು ನಮಗೆ ತಿಳಿಸಿ.
- "ಬೃಹಚ್ಚರಣ" ತ್ರೈಮಾಸಿಕ ಪತ್ರಿಕೆಯ ಮೊದಲನೆ ಸಂಚಿಕೆಗೆ ಪ್ರಾಯೋಜಿತರಾದ **ಶ್ರೀ ಟಿ.ಎಸ್. ಕೃಷ್ಣನ್**ರವರಿಗೆ ಸಂಘವು ಕೃತಜ್ಞತೆ ಅರ್ಪಿಸುತ್ತದೆ.
- ಕಿತ್ತಿಗಾನಹಳ್ಳಿ ದಿವಂಗತ ಶೇಷಗಿರಿಯಪ್ಪನವರ ಮಕ್ಕಳಾದ **ಶ್ರೀ ವೆಂಕಟಗಿರಿಯಪ್ಪ ಹಾಗೂ ಅವರ ಮಕ್ಕಳು** 28–8–2011ರಂದು ನಡೆದ ಸಮಾರಂಭದ ಊಟದ ವ್ಯವಸ್ಥೆಯನ್ನು ಪ್ರಾಯೋಜಿಸಿದ್ದಕ್ಕಾಗಿ ಸಂಘವು ಕೃತಜ್ಞತೆ ಅರ್ಪಿಸುತ್ತದೆ.

## ಅಧ್ಯಕ್ಷರ ನುಡಿ

"ಬೃಹಚ್ಚರಣ ಸಮುದಾಯವು, ಇಂದು ನಡೆಸಿರುವ ಕಾರ್ಯಕ್ರಮವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು" ಎಂದು, ನಮ್ಮವರೇ ಆದ, ಕನ್ನಡದ ಹಿರಿಯ ನಟ ಚಿತ್ರರಂಗದ ನಿರ್ಮಾಪಕ, ನಿರ್ದೇಶಕ, ಸಾಮಾಜಿಕ ಚಿಂತಕ ಶ್ರೀ ಎಸ್. ಶಿವರಾಂರವರು 28–8–2011ರಂದು ಬೆಂಗಳೂರಿನ ವಿದ್ಯಾಪೀಠದಲ್ಲಿ ನಡೆದ "ವಂದನಾ ಕಾರ್ಯಕ್ರಮ"ದಲ್ಲಿ ನಮ್ಮ ಹಿರಿಯ ಚೇತನಗಳಿಗೆ, ಪ್ರತಿಭಾ ವಿದ್ಯಾರ್ಥಿಗಳಿಗೆ ಮತ್ತು ಸಂಘದ ಹಿಂದಿನ ಪದಾಧಿಕಾರಿಗಳಿಗೆ ಸನ್ಮಾನವಮಾಡಿ, ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ತಿಳಿಸಿದ್ದು, ತಮ್ಮೆಲ್ಲರಿಗೂ ತಿಳಿದಿದೆ.

ನಮ್ಮ ಸಂಘದ ಕಾರ್ಯಕಾರಿ ಸಮಿತಿಯ ಆಶಯದಂತೆ, ನಮ್ಮ ಸಮುದಾಯದ ಎಲ್ಲ ಕುಟುಂಬದ ಸದಸ್ಯರೂ ಒಂದೇ ಸೂರಿನಡಿ ಸೇರಿ, ಸಾಂಸ್ಕೃತಿಕವಾಗಿ ವಿವಿಧ ಕಾರ್ಯಗಳನ್ನು ಹಮ್ಮಿಕೊಳ್ಳಬೇಕೆಂದು, ನಮ್ಮವರಿಗಾಗಿ, ನಮ್ಮವರಿಂದಲೇ ತ್ರೈಮಾಸಿಕ ಪತ್ರಿಕೆ 'ಬೃಹಚ್ಚರಣ' ಬಿಡುಗಡೆಗೊಳ್ಳಬೇಕೆಂಬ ಮಹದಾಸೆಯಂತೆ ನಡೆದ ಅಂದಿನ ಸಮಾರಂಭಕ್ಕೆ ಬ್ರಾಹ್ಮಣ ಸಮಾಜದ ಮುಖಂಡ, ಶಾಸಕ, ಶ್ರೀ ರವಿ ಸುಬ್ರಹ್ಮಣ್ಯ, ನಗರ ಪಾಲಿಕೆ ಸದಸ್ಯ ಶ್ರೀ ಕಟ್ಟೆ ಸತ್ಯನಾರಾಯಣ ಮುಂತಾದವರು ಭಾಗವಹಿಸಿ, ಶೋಭೆ ತಂದಿದ್ದು ಅವಿಸ್ಮರಣೀಯ. ನಿಯೋಜನೆಯಂತೆ ನಡೆದ ಈ ಸಮಾರಂಭದ ಯಶಸ್ಸಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ನಮ್ಮೆಲ್ಲ ಬಂಧುಗಳಿಗೆ ಅನಂತಾನಂತ ವಂದನೆಗಳು. ತಮ್ಮ ಸಕ್ರಿಯ ಭಾಗವಹಿಸುವಿಕೆಯು, ನಮ್ಮ ಮುಂದಿನ ಕಾರ್ಯಕ್ರಮಗಳಿಗೆ ಉತ್ತೇಜನ ಕೊಟ್ಟಿದೆ.

28–8–2011ರಂದು ನಡೆದ ನಮ್ಮ ಸಮಾರಂಭದ ಬಗ್ಗೆ ದೂರವಾಣಿ ಹಾಗೂ ಪತ್ರದ ಮೂಲಕ ಮೆಚ್ಚುಗೆ ವ್ಯಕ್ತ ಪಡಿಸಿರುವವರಿಗೆಲ್ಲಾ ವಂದನೆಗಳು.

ಸಂಘದ ಕೆಲಸ ನಿರ್ವಹಿಸಲು ನನ್ನೊಂದಿಗೆ ಉತ್ತಮ ಕಾರ್ಯಕಾರಿ ಸಮಿತಿ ಇದ್ದು, ಆತ್ಮ ವಿಶ್ವಾಸದಿಂದ ಉತ್ತಮ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳುತ್ತದೆಂದು ಪ್ರಾಮಾಣಿಕವಾಗಿ ಹೇಳುತ್ತೇನೆ.

ಮುಂಬರುವ ಹೊಸ ವರ್ಷವು ತಮ್ಮ ಕುಟುಂಬ ದವರೆಲ್ಲರಿಗೂ ಶುಭತರಲೆಂದು, ಕಾರ್ಯಕಾರಿ ಸಮಿತಿಯೊಂದಿಗೆ ಹಾರೈಸುತ್ತೇನೆ.

■ ಎಸ್. ಸೋಮಸುಂದರ

## ಮೈ.ಮಂ.ದ್ರಾ.ಬೃ.ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು : **ಎಸ್. ಸೋಮಸುಂದರ**, ಬೆಂಗಳೂರು
ಉಪಾಧ್ಯಕ್ಷರು : **ಕೆ.ಬಿ. ಮುರಳಿ**, ಬೆಂಗಳೂರು
**ಕೆ. ಮಂಜುನಾರಾಯಣ್**, ಬೆಂಗಳೂರು
ಕಾರ್ಯದರ್ಶಿ : **ವಿ.ಎಸ್. ಮಣಿ**, ಕಿತ್ತಿಗಾನಹಳ್ಳಿ
ಸಹಕಾರ್ಯದರ್ಶಿ : **ವಿ. ಅರುಣ**, ಬೆಂಗಳೂರು
ಖಜಾಂಚಿ : **ಎಸ್. ಸತ್ಯನಾರಾಯಣ**, ಕಿತ್ತಿಗಾನಹಳ್ಳಿ
ಲೆಕ್ಕಪರಿಶೋಧಕರು : **ಎಚ್.ಕೆ. ಶಶಿಧರ್**, ಬೆಂಗಳೂರು
ಸದಸ್ಯರು : **ಆರ್.ಎ. ಈಶ್ವರನ್**, ಕಿತ್ತಿಗಾನಹಳ್ಳಿ
**ಟಿ.ಎಸ್. ಮಣಿ**, ಕಿತ್ತಿಗಾನಹಳ್ಳಿ
**ಎಸ್. ಶ್ರೀನಿವಾಸನ್**, ಹೊಸಕೋಟೆ
**ಆರ್. ಗೋಪಾಲಕೃಷ್ಣ**, ಬೆಂಗಳೂರು
**ಎಸ್. ಸಿ. ಶ್ರೀನಿವಾಸ**, ಸರ್ಜಾಪುರ
**ಕೆ. ಬಿ. ಸುರೇಶ್**, ಬೆಂಗಳೂರು
**ಬಿ. ಶ್ರೀಧರ್**, ಸಂಣೆ
**ಕೆ. ಜಿ. ವೆಂಕಟೇಶ್**, ಬೆಂಗಳೂರು
**ಸರಸ್ವತಿ ನಟರಾಜನ್**, ಬೆಂಗಳೂರು

### ವಿನಂತಿ

- ಸದಸ್ಯರು ಈ ವರ್ಷ ಜರುಗಿದ ತಮ್ಮ ಮಗ/ಮಗಳು ಇವರ ವಿವಾಹದ ವಿವರಗಳನ್ನು ಪ್ರಕಟಣೆಗಾಗಿ ದಯವಿಟ್ಟು ಕಳುಹಿಸಿ.

### ಶುಭಾಶಯಗಳು

ಶ್ರೀಮತಿ ಗಾಯತ್ರಿ ಮತ್ತು ಶ್ರೀ ವೆಂಕಟೇಶ್ ಅವರ ಪುತ್ರಿ
**ಚಿ॥ ಸೌ॥ ಸಂಧ್ಯಾ ಮತ್ತು ಚಿ॥ ರಾ॥ ವಿ. ರಾಧಾಕೃಷ್ಣ**
ಇವರ ವಿವಾಹವು 3-10-2011ರಂದು ಜರುಗಿತು.
ಇವರಿಗೆ ಶುಭಾಶಯಗಳು.

### ಲೇಖನಗಳಿಗೆ ಆಹ್ವಾನ

'ಬೃಹಚ್ಚರಣ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಬೃಹಚ್ಚರಣ ಬಂಧು ಲೇಖಕರು ಲೇಖನಗಳನ್ನು ಕಳುಹಿಸಬಹುದು. ಲೇಖನಗಳು ಆದಷ್ಟೂ ಸಂಕ್ಷಿಪ್ತವಾಗಿರಬೇಕೆಂದು ವಿನಂತಿ.

ವಿಳಾಸ
**'ಬೃಹಚ್ಚರಣ'**
ನಂ–8, 3ನೇ ಕ್ರಾಸ್, ಅಣ್ಣಯ್ಯಪ್ಪ ಬ್ಲಾಕ್
ಕುಮಾರಪಾರ್ಕ್ ವೆಸ್ಟ್, ಬೆಂಗಳೂರು – 560 020
**9900113298 / 9902145359 / 9845055582**

### ಶುಭಾಶಯ

**'ಬೃಹಚ್ಚರಣ' ಸಂಚಿಕೆಗೆ**
**ಶ್ರೀ ಎಸ್. ಸೋಮಸುಂದರ ಮತ್ತು ಶ್ರೀ ಜಿ.ಎಸ್. ವೆಂಕಟೇಶ್**
**ಕುಟುಂಬದವರ ಶುಭಾಶಯಗಳು.**



ಗುಮ್ಮಳಾಪುರದ ಗುಂಡುಗೌರಮ್ಮ ದೇವಿ

## ಬೃಹಚ್ಚರಣ ಗ್ರಾಮಗಳು–2. ಗುಮ್ಮಳಾಪುರ

(ಬೆಂಗಳೂರಿನಿಂದ ದಕ್ಷಿಣಕ್ಕೆ Electronic city ಮಾರ್ಗದಲ್ಲಿ 44 ಕಿ.ಮೀ.)

1. ಕಟ್ಟಿದವರು : ಗುಮ್ಮಣ ಮತ್ತು ಪೆಮ್ಮಣ
2. ಇತರೆ ಹೆಸರುಗಳು : ಕಲ್ಯಾಣಪುರ, ದಕ್ಷಿಣಾಕಾಶಿ, ಕರ್ನಾಟಕ, ಪ್ರಭುವಾಡು, ಚೆಟ್ಟಿನಾಡು, Little England
3. 1799 ರವರೆವಿಗೆ ರಾಜಾ ಇಲಾಖೆ (ಮೈಸೂರು), ನಂತರ ಕುಂಪಣಿ ಇಲಾಖೆ (ಮದ್ರಾಸ್) ಈಗ ತಮಿಳುನಾಡು
4. ಕನ್ನಡ ಶಾಸನಗಳು = ಸುಮಾರು 25 (ಕೃಷ್ಣದೇವರಾಯನ ಕಾಲದ ಒಂದೆರಡು ಸೇರಿ)
5. ತಮಿಳು ಶಾಸನ – 1
6. ವೀರಗಲ್ಲು, ಮಾಸ್ತಿಗಲ್ಲುಗಳು – 10
7. ತಾಮ್ರಪಟುಗಳು – 2
8. ಗವಿಗಳು – 25 ಸಿಕ್ಕಿವೆ (ಇನ್ನೂ 75 ಇವೆ ಎಂದು ಹೇಳಲಾಗಿದೆ)
9. ನೀರ್ನೆಲೆಗಳು – ಕೆರೆ, ಬಾವಿ, ಕುಂಟೆ, ಜಲಧಾರೆ, ದೊಣೆ, ಮಡುವು, ಹಳ್ಳ, ಕಲ್ಯಾಣಿ, ಕೊಳ, ಹೊಳೆ, ಕಾಲುವೆ, ಬೋರ್‌ವೆಲ್ಲುಗಳು.
10. ಕವಿಗಳು : 12 ಹಳಗನ್ನಡ ಕವಿಗಳು
11. ಓಲೆಗರಿಗಳು : ಸುಮಾರು 61 ತಾಳೆಗರಿ ಗ್ರಂಥಗಳು
12. ದೇವಸ್ಥಾನಗಳು : ಸುಮಾರು 25 (ಪ್ರಮುಖವಾದವು: ಗೌರಮ್ಮ, ನರಸಿಂಹಸ್ವಾಮಿ, ಈಶ್ವರ).
13. ಗ್ರಾಮ ದೇವತೆಗಳು : ಸು. 75.
14. ಭಾಷೆಗಳು : ಕನ್ನಡ, ಬೃಹಚ್ಚರಣ, ತಮಿಳು, ತೆಲುಗು
15. ಕೆಲವು ಪ್ರೇಕ್ಷಣೀಯ ಸ್ಥಳ : ಪಾಂಡವರ ಗುಡಿಗಳು, ಹಾಲುಬಾವಿ – ನೀರುಬಾವಿ, ಮುತ್ಯಾಲ ಮಡುವು, ಶಂಕರನ ಹಳ್ಳ, ಪುಟಕೋಶಿ ಬಂಡೆ, ದೇವರ ಬೆಟ್ಟ.
16. ಬೃಹಚ್ಚರಣ ಕುಟುಂಬಗಳು : ದಿ॥ ವೆಂಕಟಕೃಷ್ಣ ಅಯ್ಯರ್ ಮತ್ತು ದಿ॥ ಕರೇದಾರ್ ಕೃಷ್ಣಮೂರ್ತಿಗಳು – ಇವರ ಕುಟುಂಬ ವರ್ಗದವರು.
17. ಆಚರಣಾ ಕಲೆಗಳು : ನಾಟಕ, ಕೇಳಿಕೆ, ಕೋಲಾಟ, ಜನಪದ ಕಲೆಗಳು.
18. ವರ್ಷಪೂರ್ತಿ ಹಿತಕರ ಉಲ್ಲಾಸ ಮಯ ವಾತಾವರಣ.

**–ಶೇಷಾಂಕ**



ಶಾಸಕ ಶ್ರೀ ರವಿಸುಬ್ರಹ್ಮಣ್ಯ ಅವರಿಂದ 'ಬೃಹಚ್ಚರಣ ಸಮಾವೇಶ' ಉದ್ಘಾಟನೆ



'ಬೃಹಚ್ಚರಣ' ವಾರ್ತಾಪತ್ರ ಚಿತ್ರರಂಗದ ದಿಗ್ಗಜ ಶಿವರಾಂ ಅವರಿಂದ ಬಿಡುಗಡೆ



ಶಾಸಕ ಶ್ರೀ ರವಿಸುಬ್ರಹ್ಮಣ್ಯ ಅವರಿಂದ ಉದ್ಘಾಟನಾ ಭಾಷಣ



ಮುಖ್ಯ ಅತಿಥಿ ನಗರಸಭಾ ಸದಸ್ಯ ಶ್ರೀ ಬಿ.ಎಸ್. ಸತ್ಯನಾರಾಯಣ



ಶ್ರೀ ಎಸ್. ಶಿವರಾಂ ಅವರಿಂದ ಅಧ್ಯಕ್ಷ ಭಾಷಣ



ಸಂಘದ ಅಧ್ಯಕ್ಷ ಶ್ರೀ ಎಸ್. ಸೋಮಸುಂದರ ಅವರಿಂದ ಪ್ರಾಸ್ತಾವಿಕ ಭಾಷಣ



ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು



ಸನ್ಮಾನಿತರು

# ಸನ್ಮಾನಿತರು




















ಪ್ರತಿಭಾ ಪುರಸ್ಕೃತರು



ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರಿಂದ ಶ್ರೀ ಶಿವರಾಂರಿಗೆ ಸನ್ಮಾನ



ಶ್ರೀ ಶಿವರಾಂರೊಂದಿಗೆ ಹಿಂದಿನ ಕಾರ್ಯಕಾರಿ ಸಮಿತಿ ಸನ್ಮಾನಿತ ಸದಸ್ಯರು



ಸ್ವಯಂ ಸೇವಕರು



ಪಂಕ್ತಿ ಭೋಜನ



ಹಿರಿಯ ಸನ್ಮಾನಿತರು



ಶ್ರೀ ಆರ್.ಎಸ್. ರಾಜಗೋಪಾಲ್ ಅವರ 'ಒಮ್ಮೆ ನಕ್ಕುಬಿಡಿ' ಪುಸ್ತಕ ಬಿಡುಗಡೆ



ಸನ್ಮಾನಿತರು

## 28-8-2011ರಂದು ಸನ್ಮಾನಿಸಲ್ಪಟ್ಟವರು

### ಸನ್ಮಾನಿತ ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯರು

1. ಬಿ.ಎಸ್. ಪದ್ಮನಾಭ, 2. ಎಚ್. ಕೃಷ್ಣಸ್ವಾಮಿ, 3. ಟಿ. ಛಾಯಾಪತಿ, 4. ಎಸ್. ಶ್ರೀನಿವಾಸಯ್ಯ, 5. ಜಿ.ವಿ. ಸುಬ್ಬಣ್ಣ, 6. ಕೆ.ಆರ್. ಲಕ್ಷ್ಮೀನಾರಾಯಣ್, 7. ಆರ್.ಕೆ. ಶಿವಪ್ರಸಾದ್, 8. ಟಿ. ನಾರಾಯಣಸ್ವಾಮಿ, 9. ಎಚ್. ಗೋಪಾಲಸ್ವಾಮಿ, 10. ಜಿ.ಎಸ್. ಸತ್ಯಮೂರ್ತಿ, 11. ಆರ್.ಎಸ್. ರಾಜಗೋಪಾಲ್.

### ಎಸ್.ಎಸ್.ಎಲ್.ಸಿ. ಪ್ರತಿಭಾ ಪುರಸ್ಕೃತರು

1. ಶ್ರೀಪ್ರೀತಾ, 2. ಎನ್.ಎಸ್. ರಕ್ಷಾ, 3. ಅಮೋಘ ಶ್ರೀಧರ್, 4. ಎಂ. ಸ್ನೇಹ, 5. ಮೇಘನಾ ಬಿ. ನಾರಾಯಣ್, 6. ಸುಪ್ರೀತ್ ರಾಘವೇಂದ್ರ, 7. ಎನ್.ಬಿ. ವಿಶ್ವಾಸ್, 8. ಶ್ವೇತಾ ಕುಲಕರ್ಣಿ, 9. ಶೀತಲ್ ಸುರೇಶ್, 10. ವಂದನಾ ವಿ., 11. ದಿವ್ಯ ಬಿ., 12. ಸ್ವರೂಪ್ ದೀಕ್ಷಿತ್.

### ದ್ವಿತೀಯ ಪಿ.ಯು.ಸಿ.ಪ್ರತಿಭಾ ಪುರಸ್ಕೃತರು

1. ಆರ್. ಎಸ್. ನಾಗಾರ್ಜುನ, 2. ಪದ್ಮಶ್ರೀ ಮುರಳಿ, 3. ವೆಂಕಟೇಶ್ ಯು., 4. ಶ್ವೇತಾ ಎ.ಕೆ., 5. ಆದಿತ್ಯ ಕಶ್ಯಪ್, 6. ರೋಶ್ನಿ ವೈ. ಗಡಿಯಾರ್, 7. ಬಿ.ಆರ್. ರಜತ್, 8. ಸಿ. ಆದಿತ್ಯ, 9. ಆದಿತ್ಯ ನಾಗರಾಜ್

### ಸನ್ಮಾನಿತ ಹಿರಿಯ ಚೇತನಗಳು

1. ಜಿ.ಕೆ. ರಾಧಕೃಷ್ಣ, 2. ಆರ್.ಎಸ್. ವೆಂಕಟಗಿರಿಯಪ್ಪ, 3. ಬಿ.ಎನ್. ಶ್ರೀನಿವಾಸಯ್ಯ, 4. ಆರ್. ವೆಂಕಟಸುಬ್ಬಯ್ಯ, 5. ಎ.ಎಸ್. ರಾಧಕೃಷ್ಣ, 6. ಹೆಚ್. ಸತ್ಯಮೂರ್ತಿ, 7. ಕೆ.ಟಿ. ಹನುಮಂತನ್, 8. ಎಲ್. ಲಕ್ಷ್ಮೀಪತಯ್ಯ, 9. ಎಸ್. ರಾಮನಾಥನ್ ಮತ್ತು ಶ್ರೀಯುತರಾದ: 1. ಎಸ್.ಕೆ. ಅನಂತಕೃಷ್ಣ – ಸುಮಿತ್ರಮ್ಮ, 2. ಎಸ್.ಆರ್.ಸೂರಪ್ಪ –ಪದ್ಮಾವತಿ, 3. ಡಿ.ವಿ. ನಟರಾಜ್ – ಎನ್. ಶಾರದಾ, 4. ಕೆ.ಟಿ. ಪಟ್ಟಾಭಿರಾಮನ್ –ಕೆ.ಪಿ. ಮೀನಾಕ್ಷಮ್ಮ, 10. ಬಿ.ಎಸ್. ಶ್ರೀನಿವಾಸ್, 11. ಎಸ್.ವಿ. ಶ್ರೀನಿವಾಸ್, 12. ಎಸ್. ರಂಗನಾಥ್, 13. ಬಿ.ಎ. ರಾಮಸ್ವಾಮಿ, 14. ಎಂ.ಎಸ್. ಸತ್ಯನಾರಾಯಣ್, 15. ಕೆ.ಎಸ್. ಸೀತಾರಾಮಯ್ಯ, 16. ಕೆ.ಎಸ್. ನಾರಾಯಣಸ್ವಾಮಿ, 17. ಎ.ಎಲ್. ಸತ್ಯನಾರಾಯಣ್, 18. ಜಿ.ವಿ. ಛಾಯಾಪತಿ, 19. ಬಿ.ಎಸ್. ರಾಜಣ್ಣ, 20. ಎ.ಎಸ್. ಶೀನಿವಾಸಮೂರ್ತಿ, 21. ಎಸ್.ಡಿ. ರಾಮಚಂದ್ರಯ್ಯ, 22. ಎಸ್.ಆರ್. ವೆಂಕಟಸುಬ್ಬಯ್ಯ, 23. ಆರ್.ವಿ. ಪದ್ಮನಾಭ್, 24. ಆರ್.ವಿ. ಗೋಪಿನಾಥ್, 25. ಕೆ.ಟಿ. ಸಂಪಾಗಿರಾಮನ್, 26. ಎ.ವಿ. ಸುಂದರ್, 27. ಎ.ಎಲ್. ಸುಬ್ರಹ್ಮಣ್ಯಂ, 28. ಟಿ.ಎಸ್. ರಾಧಕೃಷ್ಣ, 29. ಸಿ. ಶ್ರೀನಿವಾಸ್, 30. ಕೆ.ಟಿ. ಚಂದ್ರಶೇಖರ್, 31. ಆರ್. ಸಾವಿತ್ರಮ್ಮ, 32. ಅಲಮೇಲಮ್ಮ ನಾಗೇಂದ್ರನ್, 33. ಆರ್. ಸೀತಮ್ಮ, 34. ಶಾರದಮ್ಮ, 35. ಲಕ್ಷ್ಮೀದೇವಮ್ಮ, 36. ಎ.ಎನ್. ಗಿರಿಜಮ್ಮ, 37. ಆರ್.ಸಾವಿತ್ರಮ್ಮ, 38. ಶಾಂತಲಕ್ಷ್ಮಿ, 39. ಆರ್.ಎಸ್. ಲಲಿತಮ್ಮ, 40. ಡಿ. ಮಂಗಳ, 41. ಜಿ.ಎಸ್. ಗೌರಮ್ಮ, 42. ಲಕ್ಷ್ಮೀದೇವಮ್ಮ, 43. ವಿ. ಸಾವಿತ್ರಮ್ಮ, 44. ಸುಂದರಮ್ಮ ನಂಜುಂಡಯ್ಯ, 45. ಎಸ್. ಸರಸ್ವತಮ್ಮ, 46. ಎಸ್.ಎಲ್. ಸೀತಾಲಕ್ಷ್ಮಿ, 47. ಸುಬ್ಬಲಕ್ಷ್ಮಿ, 48. ಇಂದ್ರಮ್ಮಶಂಕರನಾರಾಯಣ್, 48. ಶಾರದಮ್ಮವೆಂಕಟೇಶ್, 49. ಕಮಲ ಎಸ್., 50. ಸುನಂದಮ್ಮ, 51. ಎಸ್. ಸುಬ್ಬಲಕ್ಷ್ಮಿ, 52. ಡಿ.ಎಸ್. ವೆಂಕಟರಮಣ ಅಯ್ಯರ್, 53. ಎಂ.ಡಿ. ಈಶ್ವರನ್, 54. ಟಿ.ಜಿ. ಸತ್ಯನಾರಾಯಣ, 55. ಬಿ.ಎನ್. ಛಾಯಾಪತಿ, 56. ಹೆಚ್.ಎಸ್. ಸುಬ್ಬರಾವ್, 57. ಬಿ.ಎಸ್. ನಟರಾಜ್, 58. ಆರ್.ಎಸ್. ಅಶ್ವಥನಾರಾಯಣ್, 59. ಎಸ್. ಶ್ರೀನಿವಾಸನ್, 60. ಬಿ.ಎಸ್. ಕೃಷ್ಣಮೂರ್ತಿ, 61. ಬಿ.ಆರ್. ಗಂಗಾಧರ್, 62. ಕೆ.ವಿ. ರಾಧಾಕೃಷ್ಣನ್, 63. ಟಿ.ಎಲ್. ರಾಮಚಂದ್ರನ್, 64. ಡಿ.ವಿ. ಗೋಪಾಲಕೃಷ್ಣ ಶರ್ಮ, 65. ಆರ್.ಎಸ್. ಅನಂತರಾಮ್, 66. ಎಚ್.ಪಿ. ರಾಮಕೃಷ್ಣ, 67. ಎ.ವಿ. ವಿಶ್ವನಾಥ್, 68. ಟಿ.ಜಿ. ನಾಗರಾಜ್, 69. ಎ.ವಿ. ಚಂದ್ರಶೇಖರ್, 70. ಎಂ.ಎಸ್. ಶ್ರೀಕಂಠಯ್ಯ, 71. ಬಿ.ಎ. ಈಶ್ವರಮೂರ್ತಿ, 72. ಎನ್. ಕೃಷ್ಣಮೂರ್ತಿ.

**28-8-2011ರಂದು ನಡೆದ ಸಮಾರಂಭಕ್ಕೆ ಸ್ವಯಂಪ್ರೇರಿತರಾಗಿ ಧನ ಸಹಾಯ ನೀಡಿದ ಶ್ರೀಯುತರಿಗೆ ನಮ್ಮ ಸಂಘದ ಕೃತಜ್ಞತೆಗಳು.**

● ಬಿ.ಕೆ. ಗಣೇಶ್ ಕುಮಾರ್ ● ಬಿ.ಎಸ್. ಸೂರ್ಯನಾರಾಯಣ್ ● ಬಿ.ವಿ. ಶೇಷಾದ್ರಿ ● ಸರ್ಜಾಪುರದ ಶ್ರೀನಿವಾಸ್ ● ಹೊಸಕೋಟೆ ಶ್ರೀನಿವಾಸನ್ ● ಪ್ರಸಾದ್ ● ಪ್ರದೀಪ್ ● ಗಣೇಶ್ ಶ್ರೀಧರ್ ● ವೆಂಕಟ ಸುಬ್ಬರಾವ್ ● ಗೋಪಾಲಕೃಷ್ಣ ● ರತನ್ ಕುಮಾರ್ ● ದಿನೇಶ್ ● ಕೆ.ಸಿ. ಜಯರಾಂ ● ಆರ್.ಎಸ್. ವೆಂಕಟೇಶ್ ● ಎಸ್. ರವಿಕುಮಾರ್ ● ಸತೀಶ್ ● ಆರ್.ಎ. ಈಶ್ವರನ್.


ವಡತಟ್ಟನ್ನು ವಲತಟ್ಟುಕು (ಎಡಗಡೆಯಿಂದ ಬಲಗಡೆ)

1. ಸೋಮಾರಿತನು 5. (ಸೋಮಾರಿತನ)
3. ಸೀಯ ಇರಕರ್ ಪದಾರ್ತು–3 (ಸಿಹಿ ಪದಾರ್ಥ)
5. ಪುಳಿಯೊಪಳಮೆ ಜಜ್ಜರ್ ಯಾನು–3 (ಹುಣಿಸೆಹಣ್ಣನ್ನು ಜಜ್ಜುವ ಸಲಕರಣೆ)
7. ರುಬ್ಬಿ ಪಣ್ರ್ ಒರು ಅಡಿಗೆ–4 (ರುಬ್ಬಿ ತಯಾರಿಸುವ ಒಂದು ಅಡಿಗೆ)
8. ಹೈದಕ್ಕಳ್ದ್ವಿ ವಾತೇಲೆ ಕುಳಿಕಿದ್ದು–3 (ಮಕ್ಕಳ ಭಾಷೆಯಲ್ಲಿ ಸ್ನಾನ)
9. ಗಾಳಿಪಟು ಉಡರ್ ಹಬ್ಬು–3 (ಗಾಳಿಪಟ ಬಿಡುವ ಹಬ್ಬ)
10. ಪ್ರಪಂಚತ್ತು ಪಸ್ಲು ವರುದ್ದು–3 (ಪ್ರಪಂಚಕ್ಕೆ ಮಗು ಆಗಮಿಸುವುದು)
11. ಗಂಟಲುಕು ಸಂಬಂದೀಚ್ ಕಾಯಿಲೆ–4(ಗಂಟಲಿಗೆ ಸಂಬಂಧಿಸಿದ ಕಾಯಿಲೆ)
13. ಪಳುಂಗಳಿ ಮೇಲ್ಬಾಗು–3 (ಹಣ್ಣುಗಳ ಮೇಲ್ಭಾಗ)
14. ಕನ್ನಡತ್ಲೆ ಪೂರ್ಲು–3 (ಕನ್ನಡದಲ್ಲಿ ಬಟ್ಟೆ)
15. ಅನುಬವೀಕರ್ ನಷ್ಟು–3 (ಅನುಭವಿಸುವನಷ್ಟ)
16. ರುಬ್ಬುಗುಂಡ್‌ಲೆ ಪಣ್ಣರ್ ಕಾರ್‍ಯ–3 (ರುಬ್ಬು ಗುಂಡಿನಲ್ಲಿ ಮಾಡುವ ಕೆಲಸ).

ಮೇಲಿ ಅನ್ನು ಕೀಳ್ಕು (ಮೇಲಿನಿಂದ ಕೆಳಕ್ಕೆ)

1. ಪಸ್ಲುಕು ಉಳುಂದುಗೋ ಅನ್ನುಟ್ಟು ಚೊಲ್ಲುದ್ದು–3 (ಮಗುವಿಗೆ ಮಲಗಿಕೊ ಎಂದು ಹೇಳುವುದು)
2. ತೂಂಗಾನೆ ಇರಕರೊಪ್ಪೊ ವರುದ್ದು–3 (ನಿದ್ದೆಯಲ್ಲಿ ಬರುವುದು)
4. ಪ್ರೋತ್ಸಾಹು ಕುಡುಕುದ್ದು–5 (ಪ್ರೋತ್ಸಾಹ ಕೊಡುವುದು)
6. ಚುತ್ತು–3 (ಸುತ್ತುವುದು)
10. ಅನ್ನ್ – ಪುಳಿ ಜೊತಿಕಿರಕುದ್ದು – 4 (ಅನ್ನಹುಳಿಯ ಜೊತೆಗೆ ಇರುವುದು)
11. ಕಣ್ಣೆಯೆ ಕೀಳ್ಕು ವರ್ರಾಪ್ಡೆ ಪಣ್ಣುದ್ದು – 3 ಹಗ್ಗವನ್ನು ಕೆಳಕ್ಕೆ ಬರುವಂತೆ ಮಾಡುವುದು
12. ಸ್ಲೇಟಿ ಮೇಲೆ ವಳದರ್ ಪದಾರ್ತು – 3 (ಸ್ಲೇಟಿನ ಮೇಲೆ ಬರೆಯುವ ಸಾಧನ)
13. ವರಗಲೆ ಇರುಕುದ್ದೆ – 3 (ಸೌದೆಯಲ್ಲಿ ಇರುತ್ತದೆ)

ಸರಿಯುತ್ತರ ಕಳಿಸಿದವರ ಹೆಸರುಗಳನ್ನು ಉತ್ತರಗಳೊಂದಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಪದಬಂದು–1ರ ಉತ್ತರ ಮುಂದಿನ ಸಂಚಿಕೆಯಲ್ಲಿ



# ಬೃಹಚ್ಚರಣ – ಕನ್ನಡ : ದ್ವಿಭಾಷಿಕ ನಿಘಂಟು

9. **ಅಣೆ** (ನಾ) ಅಣೆಗೋಲು, ಎತ್ತಿನ ಗಾಡಿಯಲ್ಲಿ ಪದಾರ್ಥಗಳು ಆ ಕಡೆ ಈ ಕಡೆ ಬೀಳದಂತೆ ಎರಡೂ ಬದಿಗೆ ನಟ್ಟಿರುವ ಅಡ್ಡಗೋಲು. (ಕನ್ನಡದ **'ಅಣೆಕಟ್ಟೆ'** ಪದದ **'ಅಣೆ'** ಗಮನಿಸಿ.)
**ಎರ್ಧಿಬಂಡಿಕಿ ಇಂದ್ಸಲು ವೇರೆ ಅಣೆಗಿ ಪೋಡೀಕೋಣು** ಎತ್ತಿನ ಗಾಡಿಗೆ ಈ ಸಲ ಬೇರೆ ಅಣೆಗೋಲುಗಳನ್ನು ಹಾಕಿಸಬೇಕು. This time cart should be fixed with other **ANE.**
<ದ್ರಾವಿಡ.

10. **ಅತ್ತಿಪಿನ್ನೆ, ಅತ್ತಿಪಿನ್ನೇನು** (ಅ) ಆಮೇಲೆ, ತರುವಾಯ
**ವಳಚ್ಚು ವರಗಡು, ಅತ್ತಿಪಿನ್ನೆ/ಅತ್ತಿಪಿನ್ನೇನು ಆರಿಪೋಡು** ಬೆಳಕು ಬರಲಿ, ಆಮೇಲೆ ಒಣಗಿ ಹಾಕು.
Let there be light, dry the clothes afterwards.
ಅತ್ತಿ + ಪಿನ್ನೆ , ಅತ್ತಿ + ಪಿನ್ನೇನು **ಅತ್ತಿ**=ಅದರ, **ಪಿನ್ನೆ, ಪಿನ್ನೇನು**=ಹಿಂದೆ
<ದ್ರಾವಿಡ

**ಸಂಕೇತಗಳು** ನಾ=ನಾಮಪದ, ಕ್ರಿ=ಕ್ರಿಯಾಪದ, ಅ=ಅವ್ಯಯ. ~=ಅನುನಾಸಿಕೀಕರಣ

**(ಮುಂದುವರೆಯುವುದು)**

[ಪೆರಿಚರಣ, ಬೃಹಚ್ಚರಣ ಅಥವಾ ಎಂಗಳ್ದೆ ವಾತೆ–ಎನ್ನುವ ಈ ಭಾಷೆಯನ್ನು ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಹಳ್ಳಿ ಪಟ್ಟಣಗಳಿಗೆ ತಂಜಾವೂರಿನ ಹತ್ತಿರದ ಮಂಜಪುತ್ತೂರು(ಹರಿಹರನ 'ನಂಬಿಯಣ್ಣನರಗಳೆ'ಯಲ್ಲಿ ಬರುವ ಮಣಮಂಜ ಪುತ್ತೂರು ಇರಬಹುದೇ?) ಎನ್ನುವ ಅಗ್ರಹಾರದಿಂದ ವಲಸೆ ಬಂದರೆಂದು ಹೇಳಲಾಗುವ ಅದ್ವೈತಿಗಳಾದ **ಸ್ಮಾರ್ಥ ಬ್ರಾಹ್ಮಣ ಅಯ್ಯರ್** ವರ್ಗದೊಳಗೆ ಬರುವ **' ಮೈಸೂರು ಮಂಜಪುತ್ತೂರು ದ್ರಾವಿಡ ಬೃಹಚ್ಚರಣ ಬ್ರಾಹ್ಮಣ '** ರ ಪಂಗಡಕ್ಕೆ ಸೇರಿದ ಗುಂಪಿನವರು ಮಾತನಾಡುತ್ತಾರೆ. ಡಿ.ವಿ.ಗುಂಡಪ್ಪ, ಬಿ.ಜಿ.ಎಲ್.ಸ್ವಾಮಿ, ಎಸ್.ದಿವಾಕರ,ವೈ.ಎಸ್.ಗುಂಡಪ್ಪ, ಕಾಮರೂಪಿ(ಎಂ.ಎಸ್.ಪ್ರಭಾಕರ್), ಹಾಸ್ಯನಟ ಶಿವರಾಂ, ಭಾರತಿ ಸಂಪಂಗಿರಾಮಯ್ಯ ಮುಂತಾದವರು ಈ ಪಂಗಡಕ್ಕೆ ಸೇರಿದವರು.]

**ಈ ಭಾಷೆಯನ್ನು ಕುರಿತ ಕೆಲವು ಹೆಚ್ಚಿನ ತಿಳಿವಳಿಕೆ:**

1. ಈ ಭಾಷೆಗೆ ಲಿಪಿಯಿಲ್ಲ.
2. ಈ ಜನ ವ್ಯವ್ಹಾರಕ್ಕೆ ಕನ್ನಡವನ್ನೇ ಬಳಸುತ್ತಾರೆ. ಕನ್ನಡ ಸಾಹಿತ್ಯಾಸಕ್ತರು.
3. ಮಹಾಪ್ರಾಣಾಕ್ಷರಗಳು ಇಲ್ಲ.
4. ಶಕಟರೇಫ, ರಳ ಅಕ್ಷರಗಳು ಈಗಂತೂ ಇಲ್ಲ, ಹಿಂದೆ ಇದ್ದಿರುವ ಸಾಧ್ಯತೆಗಳಿವೆ.
5. ಅನೇಕ ಸಬಿಂದುಕಗಳು ಉಳಿದುಕೊಂಡಿವೆ.
6. ಎಲ್ಲ ಕಡೆ 'ಬ' ಅಕ್ಷರ 'ವ' ಆಗಿಲ್ಲ.
7. ಅನೇಕ ಕಡೆ 'ಅನುನಾಸಿಕೀಕರಣ' ಈ ಭಾಷೆಯ ವಿಶೇಷ.
8. 'ಅ' ವರ್ಣದಲ್ಲಿ ಎರಡಕ್ಷರಗಳಿವೆ.
9. ಎಲ್ಲ ಕಡೆ 'ಪ'ಕಾರ 'ಹ'ಕಾರವಾಗಿಲ್ಲ.
10. ಸಾಹಿತ್ಯ ಇದ್ದದ್ದರ ಬಗ್ಗೆ ದಾಖಲೆ ಇಲ್ಲ.
12. ಮೊದಲನೆಯ ವಿಭಕ್ತಿ ಪ್ರತ್ಯಯ ಇಲ್ಲ.
13. ಹೊಸಗನ್ನಡದ ಆಖ್ಯಾತ ಪ್ರತ್ಯಯ **'ಅನ್'** ಎಂಬುದಕ್ಕೆ ಈ ಭಾಷೆಯಲಿ ಪೂರ್ವದ ಹಳಗನ್ನಡದಂತೆ **'ಓನ್'** ಎನ್ನುವ ಪ್ರತ್ಯಯವಿದೆ. ಉದಾಹರಣೆಗೆ ಬಂದನು=ವಂದೋನ್, ವನ್ದಾಳ್, ವನ್ದಾರ್, ಅಂತ್ಯವ್ಯಂಜನ ಲೋಪವಾಗಿದೆ. (ವಂದೊ, ವನ್ದಾ, ವನ್ದ)
14. ಅನೇಕ ಸಂದರ್ಭಗಳಲ್ಲಿ ಸಂಧಿಕಾರ್ಯಗಳು ನಡೆಯುವುದೆ ಇಲ್ಲ.
15. ಮೂರನೆಯ ಮತ್ತು ಐದನೆಯ ವಿಭಕ್ತಿ ಪ್ರತ್ಯಯ ಒಂದೇ ಆಗಿದೆ.

**ಇನ್ನಷ್ಟು :**

1. ಈ ಪೆರಿಚರಣ–ಕನ್ನಡ ದ್ವಿಭಾಷಿಕ ನಿಘಂಟನ್ನು ಕನ್ನಡ ಲಿಪಿಯಲ್ಲಿ ಬರೆದಿರುವೆನು. ಪೆರಿಚರಣ ಭಾಷೆಯ ವಾಕ್ಯಪ್ರಯೋಗಗಳನ್ನು ಕನ್ನಡ ಲಿಪಿಯಲ್ಲಿ ನೀಡಿ ಅದರ ಕನ್ನಡಾನುವಾದ ವಾಕ್ಯಗಳನ್ನೂ ನೀಡಿರುವೆನು.
2. ಈ ಭಾಷೆಯಲ್ಲಿ ವ್ಯವಹರಿಸುವ **'ಮೈಸೂರು ಮಂಜಪುತ್ತೂರು ದ್ರಾವಿಡ ಬೃಹಚ್ಚರಣ ಬ್ರಾಹ್ಮಣ'**ರ ಹೆಸರಿನಲ್ಲಿರುವ ದ್ರಾವಿಡ ಪದವನ್ನು ಗಮನಿಸಿ.

[~ = ಅನುನಾಸಿಕೀಕರಣ] (ಮೂಗಿನ ಸಹಾಯದ ಉಚ್ಚಾರಣೆ)

■ **ಕೆ.ಎಸ್. ಮಧುಸೂದನ**

# ಬೃಹಚ್ಚರಣ – ಕೆಲವು ವಿಚಾರಗಳು

ತಂಜಾವೂರು ಪ್ರಾಂತ್ಯದ ಮಂಜಪತ್ತೂರು ನಮ್ಮವರ ಮೂಲಸ್ಥಳ. ಅಲ್ಲಿ ನಮ್ಮವರು ಜೀವನೋಪಾಯಕ್ಕಾಗಿ ಶಿಕ್ಷಕ, ಶಾನುಭೋಗ, ಪೌರೋಹಿತ್ಯ ವೃತ್ತಿ ಮಾಡುತ್ತಿದ್ದರಂತೆ. ಕ್ಷಾಮ ಬಂದ ಕಾರಣ, ಅಲ್ಲಿಂದ ಜನರು ದಕ್ಷಿಣ ಭಾಗಕ್ಕೆ ವಲಸೆ ಬಂದು ಕಿತ್ತಿಗಾನಹಳ್ಳಿ, ಸಣ್ಣೆ, ತಿಂಡ್ಲು, ಗುಂಜೂರು, ತಟ್ಟನಹಳ್ಳಿ, ಕಾಚರಕನಹಳ್ಳಿ, ಮಟ್ಟನಹಳ್ಳಿ, ಸರ್ಜಾಪುರ, ಹಸೀಗಾಳ, ರಾಜಾಪುರ ಇನ್ನೂ ಮುಂತಾದ ಬೆಂಗಳೂರಿನ ಸುತ್ತಮುತ್ತಲಿನ ಹಳ್ಳಿಗಳಿಗೆ ಬಂದರು. ಕಾಲಕ್ರಮೇಣ ಜೀವನೋಪಾಯಕ್ಕಾಗಿ ಇನ್ನಿತರ ವೃತ್ತಿಗಳನ್ನು ಆರಂಭಿಸಿದರು. ಕರ್ನಾಟಕದಲ್ಲಿ ನೆಲೆಸಿ, ಜೀವನ ನಡೆಸಿ, ಇಲ್ಲಿನ ಸೌಲಭ್ಯಗಳನ್ನು ಬಳಸಿದ್ದರಿಂದ, ಅದರ ಋಣ ತೀರಿಸುವಲ್ಲಿ 'ಕನ್ನಡ'ವನ್ನೇ ಮಾತೃಭಾಷೆಯನ್ನಾಗಿ ಮಾಡಿಕೊಂಡಿದ್ದೇವೆ. ಮಾನವರು ಪರಸ್ಪರ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು, ಭಾವನೆಗಳನ್ನು ಹಂಚಿಕೊಳ್ಳಲು ಉಪಯೋಗಿಸುವ ಮಾಧ್ಯಮವೇ ಭಾಷೆ. ಕನ್ನಡ ನಾಡಿನಲ್ಲಿ, ಕನ್ನಡ ಜನರೊಡನೆ ಬೆರೆತು, ಕನ್ನಡ ಭಾಷೆಯನ್ನು ಮಾತನಾಡಲು ಪ್ರಾರಂಭಿಸಿದರು. ಹೀಗೆ ಮಾಡುತ್ತಾ ನಮ್ಮ ಜನಾಂಗದ್ದೇ ಆದ 'ಬೃಹಚ್ಚರಣ' ಭಾಷೆಯ ಬಳಕೆ ಕಡಿಮೆಯಾಗತೊಡಗಿತು.

'ಬೃಹಚ್ಚರಣ' ಭಾಷೆ (ನಮ್ಮ ಜನಾಂಗದ್ದೇ ಆದ ಭಾಷೆ) ಇದೆ ಎಂದು ಕೆಲವರಿಗೆ ತಿಳಿದಿಲ್ಲ. 'ಬೃಹಚ್ಚರಣ' ಭಾಷೆ (ಎಂಗುಳ್ದೆ ವಾತೆ) ಕನ್ನಡ ಮತ್ತು ತಮಿಳು ಮಿಶ್ರಿತ ಭಾಷೆ. ಇದರಲ್ಲಿ ಮಲಯಾಳಂ ಭಾಷೆಯ ಛಾಯೆಯೂ ಇದೆ. ಕನ್ನಡ, ತಮಿಳು, ಮಲಯಾಳಂ ಭಾಷೆಗಳು ದ್ರಾವಿಡ ಭಾಷೆಗಳು. ಹಾಗೆಯೇ ನಮ್ಮ ಭಾಷೆಯ ಮೂಲ– ದ್ರಾವಿಡ.

ಯಾವುದೇ ವಿಚಾರವು ಸುಲಭವಾಗಿ ಗ್ರಹಿಸಬೇಕಾದರೆ ಅದು ಮಾತೃಭಾಷೆಯಾಗಿದ್ದಲ್ಲಿ ಅದು ಸುಲಭಸಾಧ್ಯ. ಮಾತೃಭಾಷೆಯನ್ನು ಕಲಿಯಬೇಕಿಲ್ಲ. ಹುಟ್ಟಿನಿಂದಲೇ ಮನೆಯವರೊಡನೆ ಬೆರೆತು, ಅವರೊಡನೆ ವಿಷಯ ವಿನಿಮಯಿಸುವಾಗಲೇ ಕಲಿಯುತ್ತೇವೆ. ಈಗ ನಮ್ಮ ಮನೆಗಳಲ್ಲಿ ಕನ್ನಡ ಮಾತನಾಡುತ್ತಿರುವುದರಿಂದ ನಾವು ಅದನ್ನು ಪರೋಕ್ಷವಾಗಿ ಕಲಿಯಬೇಕಾಗಿಲ್ಲ. ಹೊಸ (ಬೇರೆ) ಭಾಷೆಯನ್ನು ಕಲಿಯಲು ಪ್ರಯತ್ನಿಸಬೇಕು. ಈಗ ನಾವುಗಳು ನಮ್ಮ ಮಾತೃಭಾಷೆಯನ್ನೇ ಕಲಿಯಬೇಕಾಗಿದೆ.

ಬೃಹಚ್ಚರಣ ಭಾಷೆಗೆ ಲಿಪಿ ಇಲ್ಲದ ಕಾರಣ, ಈ ಭಾಷೆಯನ್ನು ಮಾತನಾಡಿಯೇ ಉಳಿಸಬೇಕು. ಈ ಭಾಷೆಯನ್ನು ಕನ್ನಡ ಲಿಪಿಯಲ್ಲಿ ಬರೆಯುತ್ತೇವೆ. ಹೀಗೆ ಈ ಭಾಷೆ ಇಂದಿಗೂ ಉಳಿಯುವುದಕ್ಕೆ ಕಾರಣ ಮನೆಗಳಲ್ಲಿ ಇಂದಿಗೂ ಯುವಪೀಳಿಗೆಯವರೊಡನೆ ಸ್ಪಂದಿಸುತ್ತಿರುವ ಕೆಲವು ವ್ಯಕ್ತಿಗಳಿಂದ. ಭಾಷೆಯ ಬೆಳವಣಿಗೆಯಾಗಬೇಕಾದಲ್ಲಿ ಎಲ್ಲರೂ ತಮ್ಮ ಮನೆಗಳಲ್ಲಿ ಈ ಭಾಷೆಯನ್ನೇ ಮಾತನಾಡಲು ಪ್ರಯತ್ನಿಸಬೇಕು. ಹಾಗೂ ಮುಂದಿನ ಪೀಳಿಗೆಗೆ ಕಲಿಸಿ ಭಾಷೆಯನ್ನು ಉಳಿಸಬೇಕು.

ನಾವೆಲ್ಲರೂ ಸೇರಿ ಬೃಹಚ್ಚರಣ ಭಾಷೆಯನ್ನು ಬೆಳಸೋಣ, ಉಳಿಸೋಣ!

ಈ ಮೇಲಿನ ವಿಚಾರಗಳನ್ನು ನನಗೆ ತಿಳಿಸಿದ ಹಿರಿಯರಾದ ಶಾಂತಾ ವೆಂಕಟೇಶ್ ಹಾಗೂ ಉಮಾ ಕೃಷ್ಣದಾಸ್‌ರವರಿಗೆ ನನ್ನ ವಂದನೆಗಳು.

■ **ಅಚಲಾ ರಮೇಶ್**

## ಶ್ರೀ ಶೇಷಾದ್ರಿ ಗವಾಯಿ ಮತ್ತು ಶ್ರೀ ಛಾಯಾಪತಿ



ಬೃಹಚ್ಚರಣ ಸಮುದಾಯದಲ್ಲಿ ಕಲಾವಿದರಿಗೆ, ವಿದ್ಯಾವಂತರಿಗೆ ಕೊರತೆಯಿಲ್ಲ. ಪ್ರತಿಯೊಂದು ಮನೆಯಲ್ಲೂ ಒಬ್ಬರಾದರೂ ಕಲಾವಿದರೋ ಅಥವಾ ಕ್ರೀಡಾಪಟುವೋ ಇರುತ್ತಾರೆ. ಸಂಕೋಚ ಪ್ರವೃತ್ತಿಯಿಂದ ಹೊರಬರುವುದಿಲ್ಲವಷ್ಟೆ. ಅವರಿಗೆ ಅವಕಾಶ ಸಿಕ್ಕಿದಾಗ ಮುನ್ನುಗ್ಗಬೇಕು.

ಸಂಗೀತ ಕ್ಷೇತ್ರದಲ್ಲಿ ಸಂಗೀತ ಶಾಲೆಗಳನ್ನು ತೆಗೆದು ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಹೇಳಿಕೊಟ್ಟಿರುವ ನಮ್ಮಲ್ಲನೇಕರಲ್ಲಿ ಹೆಸರಿಸಬೇಕಾಗಿರುವುದು ಹಿಂದೂಸ್ತಾನಿ ಗಾಯಕ, ವಿಮರ್ಶಕ, ನಟ, ಉತ್ತಮ ಗುರುಗಳಾದ ಶ್ರೀ ಶೇಷಾದ್ರಿ ಗವಾಯಿ ಹಾಗೂ ಕರ್ಣಾಟಕ ಸಂಗೀತದಲ್ಲಿ ಶ್ರೀ ಕೆ.ಎಸ್. ಛಾಯಾಪತಿ.

ರಾಜಾಪುರದ ಶ್ರೀ ಶೇಷಾದ್ರಿ ಗವಾಯಿಯವರು "ಅರವಿಂದ ಸಂಗೀತ ವಿದ್ಯಾಲಯ"ದ ಸಂಸ್ಥಾಪಕ, ಪ್ರಾಂಶುಪಾಲರು. ವಿಶಾಲವಾದ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಸನ್ಮಾನಿತರು. ಸಂಗೀತದ ಸವಿಸ್ತಾರ ಲೇಖನಗಳಿಗಾಗಿಯೇ ಮೀಸಲಿಟ್ಟ "ಗಾಯನ ಗಂಗಾ" ಏಕೈಕ ಮಾಸ ಪತ್ರಿಕೆಯನ್ನು, ತಬಲಾ ವಿದ್ವಾನ್ ಶ್ರೀ ವೆಂಕಟಕೃಷ್ಣ (ವತ್ಸ) ರವರೊಂದಿಗೆ ತಮ್ಮ ಸ್ವಂತ ಅಚ್ಚುಕೂಟದಿಂದ ಹೊರತರುತ್ತಿದ್ದುದು ಹೆಮ್ಮೆಯ ಸಂಗತಿ. "ಉರಗಾಚಲ" ಎಂಬ ನಾಮಾಂಕಿತದೊಂದಿಗೆ ನೂರಾರು ರಚನೆಗಳನ್ನು ರಚಿಸಿದ್ದಾರೆ. ಕರ್ನಾಟಕ ರಾಜ್ಯ ಸಂಗೀತ-ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಕಾಚರಕನ ಹಳ್ಳಿ ಶ್ರೀ ಛಾಯಾಪತಿಯವರು "ಗೀತಾ ಮಂದಿರ ಸಂಗೀತ ಶಾಲೆಯ" ಸಂಸ್ಥಾಪಕ-ಪ್ರಾಂಶುಪಾಲರು. ಕರ್ನಾಟಕ ಸಂಗೀತದೊಂದಿಗೆ ಭಕ್ತಿಗೀತೆಗಳ ಪ್ರವರ್ತಕರಾಗಿದ್ದರು. "ಛಾಯಾಭಕ್ತ" ಎಂಬ ನಾಮಾಂಕಿತದಿಂದ "ಭಕ್ತಿಗೀತಾವಳಿ" ಎಂಬ ನೂರಾರು ಗೀತೆಗಳ ದೇವರನಾಮದ ಹಾಡುಗಳ ಪುಸ್ತಕ ಪ್ರಕಟಿಸಿದ್ದರು. 1938ರಲ್ಲೆ "ಸರಸವಾಣಿ" ಎಂಬ ವಾದ್ಯಗೋಷ್ಠಿಯನ್ನು ತಮ್ಮ ಸಂಬಂಧಿಕರೊಂದಿಗೆ ಸ್ಥಾಪಿಸಿ ಹುಟ್ಟು ಹಾಕಿದವರು. ಬೆಂಗಳೂರಲ್ಲಿ ಪ್ರಥಮಿಗರು.

ಈ ಇಬ್ಬರೂ ಸಂಗೀತ ಕ್ಷೇತ್ರದ ದಿಗ್ಗಜರು, ಹಾರ್ಮೋನಿಯಂ ನುಡಿಸುವುದರಲ್ಲಿ ಸಿದ್ಧಹಸ್ತರು, ಕರ್ನಾಟಕ ರಾಜ್ಯ ಸಂಗೀತ ಪರೀಕ್ಷೆಗಳ ಪರೀಕ್ಷಕರಾಗಿದ್ದವರು. ಆಕಾಶವಾಣಿ ಕಲಾವಿದರಾಗಿದ್ದವರು. ಇಂದು ನಮ್ಮೊಂದಿಗಿಲ್ಲದಿದ್ದರೂ ಬೃಹಚ್ಚರಣ ಸಮುದಾಯ ಅವರನ್ನು ಮರೆಯುವಂತಿಲ್ಲ.

■ *ಕಾಚರಕನಹಳ್ಳಿ ನಟರಾಜ್*

**ಸದಸ್ಯರ ಗಮನಕ್ಕೆ**

**ಒಂದು ವರ್ಷ ಪೂರೈಸಿರುವ ಸದಸ್ಯರು ರೂ. 200/- ಪಾವತಿ ಮಾಡಿ, ತಮ್ಮ ಸದಸ್ಯತ್ವವನ್ನು ನವೀಕರಿಸಿಕೊಳ್ಳಬೇಕಾಗಿ ವಿನಂತಿ.**

## ಓದುಗರ ಪತ್ರಗಳು



ಮಾನ್ಯರೆ,

ತಾವು ಆಯೋಜಿಸಿದ್ದ 75ಕ್ಕೂ ಹೆಚ್ಚು ವಸಂತಗಳನ್ನು ಪೂರೈಸಿದ ಹಿರಿಯ ಚೇತನ ವಂದನಾ ಕಾರ್ಯಕ್ರಮದಲ್ಲಿ ನಾನು ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಹಾಗಿದ್ದರು, ಕಾರ್‍ಯಕ್ರಮದ ವಿವರಗಳನ್ನು ಶ್ರೀ ನಾಗೇಶ್ ಮೂಲಕ ತಿಳಿದುಕೊಂಡು ಮನಸಾ ಸಂತೋಷಪಟ್ಟಿದ್ದೇನೆ.

ತಾವು ಶ್ರೀ ನಾಗೇಶ್ ಮೂಲಕ ಕಳುಹಿಸಿದ ಉಡುಗೊರೆಗಳು ಹಾಗೂ ವಂದನಾ ಸಮರ್ಪಣ ಪತ್ರ ತಲುಪಿದೆ. ಇದಕ್ಕಾಗಿ ಧನ್ಯವಾದಗಳು.

ಇಂತೀ ನಮಸ್ಕಾರಗಳು

**ಟಿ.ಎಲ್. ರಾಮಚಂದ್ರನ್**

★ ★

**ಶಿವಂ**

ಪತ್ರಿಕೆ ಮೊದಲ ಸಾರಿಕಿ ಯಂಗಳಕು ಕುಡುತ. ಉಂಗಳಕು, ಅಧ್ಯಕ್ಷರುಕು ಎಂದೆ ನಮಸ್ಕಾರಂಗು. ಯನಕು ಇದಕು ಮುನ್ನೆ ಅಧ್ಯಕ್ಷರುಕು, ಅರುಣ ಅವಾಳ್‌ಕು ಫೋನ್‌ಲೆ ಚೊನ್ನಾಪ್ಪಡೆ ಪತ್ರಿಕೆ ವಂದಿರ್‌ಕಲ್ಲೆ. ಇಂದ್ ಸಾರಿವಂದು ನಾ ಕಾರ್ಯಕ್ರಮತ್‌ಕು, ವಂದಿರ್ದ್, ಕಾರ್ಯಕ್ರಮು ನನ್ನೆ ಆಚಿ. ಎನಕು ಸಂತೋಷು ಆಯದೆ. ಉಂಗಳದೆ, ಕಾಫಿ, ಊಟತೀ ವ್ಯವಸ್ಥೆ ಕೂಡ ನನ್ನೆ ಇರುಂದು. ನಾ ಸಂಗತುಕು ಡೊನೇಷನ್ ಚಾಲಕ ಶಕ್ತಿ ಇರಂದತ್ನೆ ಕುಡುತವ್ನೆ. ಹೈದೆಕ್ಕು ನನ್ನೆ ಎಲ್ಲಾ ವಿಚಾರಂಗಳ್ಕೂ ಎಂಗಳುಕು ಸಹಾಯಮೇ ಇರ್‌ಂದ. ಅದೇ ಸಂತೋಷು ಎನಕು. ವಿಶೇಷಮೆ ಸರ್ಜಾಪುರತಿ ಶ್ರೀನಿವಾಸ್ ಶ್ರೀಧರ್ ಸಂಣೆ ಶ್ರೀಧರ್ ಇವಾಳ್ದೆ ಜ್ಞಾಪಕು ವರದ್ದೆ. ಅವಕಾಶು ವಂದಕ ಅವಾಳ್ಕು ಎಂದೇ ವಿಶ್ವಾಸು ಚೊಲ್ಲುಂಗೋ. ಡಿವಿಜಿ ಪುಸ್ತಕಂಗಳ್ಳೆ ಸಂಕೀರ್ಣ ಅನ್ನುಟ್ಟು ಅದೆ. ಅತ್ಲೆ ನಮ್ದೆ ಬೃಹಚ್ಚರಣತೀ ವಿಚಾರುಂಗು ಅನೇಕಮೆ ವಂದದೆ. ನಾ ಶಾನೆ ಸಾರಿ ಓದವ್ನೆ. ಅತ್ತೆ ಕೂಡ ಕೊಂಚು ನಮ್ದೆ ಪತ್ರಿಕೆಲೆ ಪೋಡೋಣು ಅನ್ನು ವಿನಂತಿ.

ಇತಿ ಉಂಗಳ್ದೆ ಸದಸ್ಯ

**ಎಸ್.ಎನ್. ಕೃಷ್ಣಮೂರ್ತಿ**

★ ★

ಮಾನ್ಯ ಅಧ್ಯಕ್ಷರೇ, ನಮಸ್ಕಾರ

ನಮ್ಮ ಸಮಾಜದ ಒಗ್ಗೂಡಿಕೆಗಾಗಿ, ಸಮುದಾಯದವರೆಲ್ಲರ ಏಳಿಗೆಗಾಗಿ, ಬೃಹಚ್ಚರಣ ಸಂಘವು, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ.

ಸಂಘದ ಸದಸ್ಯರ ಹುಟ್ಟು ಹಬ್ಬದಂದು ಸಂಘದ ಪದಾಧಿಕಾರಿಗಳು ದೂರವಾಣಿ ಮೂಲಕ ಶುಭಕೋರುವ ಸಂಪ್ರದಾಯ, ಹುಟ್ಟುಹಬ್ಬದ ದಿನದ ಶುಭಾರಂಭ ಈ ಶುಭಕಾರ್ಯ ನಂಟು ಬೆಳೆಯುವುದರಲ್ಲಿ ಸಂದೇಹವಿಲ್ಲ.

ನನ್ನ ಕುಟುಂಬದ ಎಲ್ಲಾ ಸದಸ್ಯರೂ ಸಂಘಕ್ಕೆ ಸದಸ್ಯರಾಗಿರುವಂತೆ, ನಮ್ಮ ಸಮಾಜದ ಪ್ರತಿಯೊಬ್ಬ ಆದಾಯ ತರುವ ವ್ಯಕ್ತಿಯೂ ಸಂಘದ ಸದಸ್ಯರಾಗಬೇಕೆಂಬುದು ನನ್ನ ಆಶಯ.

ವಂದನೆಗಳು

**ಛಾಯಾ ಭಗವಾನ್**

Book-Post

To,
RAMESH R
# 626/14 5TH MA!
4TH BLOCK
RAJAJINAGAR
BANGALORE 56 010 - 9886034048

**ಜಾಹೀರಾತು ನೀಡಿ ಸಹಕರಿಸಬೇಕಾಗಿ ಪ್ರಾರ್ಥನೆ**

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Ila Mudrana, No. 36, 40Ft. Road, Raghavanagar, NTY Layout, Bengaluru-560 026.